

# ಸಾವಿತ್ರಿ-ಕೃಷ್ಣ ಸಮಾಲೋಚನೆ

ಇಬ್ಬರೂ ಹತ್ತು ಗಂಟೆಗೆ ಎದ್ದು ಕೋಣೆಯಿಂದ ಹೊರಗೆ ಬಂದರು. ದಮಯಂತಿ ನನ್ನ ಹತ್ತಿರಕ್ಕೆ ಬಂದು ಕುಳಿತುಕೊಳ್ಳುತ್ತ 'ಸಾರಿ ಡ್ಯಾಡ್. ಅಮೆರಿಕದಲ್ಲಿ ಬಾಗಿಲು ತೆಗೆದಿದ್ದರೆ ಯಾರಿಗೂ ನಿದ್ದೆ ಬರುವುದಿಲ್ಲ. ಅದಕ್ಕಾಗಿ ನಾನು ಬಾಗಿಲು ಮುಚ್ಚಿಕೊಂಡು ಮಲಗಿದ್ದೆ' ಎಂದಳು. 'ಅಮೆರಿಕದಲ್ಲಿ ಇದೂ ಕೂಡ ಒಂದು ರೋಗವೇ?' ಎಂದುಬಿಟ್ಟೆ. ದಮಯಂತಿ ಸುಮ್ಮನಾಗಿಬಿಟ್ಟಳು. ಅನಂತರ ಛೀ.. ಯಾಕೆ ಹೀಗೆ ಮಾತನಾಡಿಬಿಟ್ಟೆ ಎಂದುಕೊಂಡು, ನಗುತ್ತಾ 'ಸಾರಿ ದಮಯಂತಿ ಎಂದೆ' ಅಷ್ಟರಲ್ಲಿ ಅತ್ತೆ ಮಾವ ಮನೆಗೆ ಬಂದು ನನ್ನ ಮನಸ್ಸು ಸ್ವಲ್ಪ ನಿರಾಳವಾಯಿತು. ಅನಂತರ ಎಲ್ಲರೂ ಸೇರಿ ಅತ್ತೆ ಮಾವನ ಜೊತೆಗೆ ಊಟ ಮಾಡಿದೆವು. ಮುಂದಿನ ಹದಿನೈದು ದಿನಗಳು ದಮಯಂತಿ ನಮ್ಮ ಮನೆಯಲ್ಲಿ ಕೆಲವು ದಿನಗಳು, ಅತ್ತೆ ಮಾವನ ಮನೆಯಲ್ಲಿ ಕೆಲವು ದಿನಗಳು ಕಳೆದರು. ಅನಂತರ ಕೊಡಗು, ಮೈಸೂರು, ಊಟಿ, ಗೋವಾ ಇನ್ನು ಹಲವಾರು ಊರು ಪಟ್ಟಣಗಳನ್ನು ಸುತ್ತಿಕೊಂಡು ಬಂದ ದಮಯಂತಿ ಮತ್ತು ಜಾನ್ ಹದಿನೈದು ದಿನಗಳಾದ ಮೇಲೆ ಅಮೆರಿಕಕ್ಕೆ ಹೊರಟು ಹೋದರು. ನಾನು ಸಾವಿತ್ರಿ ಒಳಗೊಳಗೆ ಕುಗ್ಗಿ ಹೋಗಿದ್ದೆವು. ನನ್ನ ಮುಖ ನೋಡಿದ ಎಷ್ಟೋ ಗೆಳೆಯರು ಮತ್ತು ಸಹೋದ್ಯೋಗಿಗಳು ನನ್ನನ್ನು ಪ್ರಶ್ನಿಸಿದ್ದರು. ನಾನು ಮಾತ್ರ ತುಟಿ ಬಿಚ್ಚಲಿಲ್ಲ.

ನಾನು, ಸಾವಿತ್ರಿ ನಮ್ಮ ಮಕ್ಕಳನ್ನು ಬೆಳೆಸಿದ ರೀತಿ ಸರಿ ಇಲ್ಲವೆ? ಅಥವಾ ನನ್ನ ಅತ್ತೆ ಮಾವ, ನನ್ನ ತಂದೆ ತಾಯಿ, ನನ್ನನ್ನು ಸಾವಿತ್ರಿಯನ್ನು ಬೆಳೆಸಿದ ರೀತಿ ಸರಿ ಇಲ್ಲವೆ? ಈಗ ಈ ಎಲ್ಲ ಗೊಂದಲಗಳಿಗೂ ಕಾರಣ ಎಂದರೆ ನಮ್ಮ ಮಕ್ಕಳ ತಲೆಮಾರು ನಡೆದುಕೊಳ್ಳುತ್ತಿರುವ ರೀತಿ! ಮುಂದೆ ಬರುವ ಅವರ ಮಕ್ಕಳ ತಲೆಮಾರಿಗೆ ಏನೆಲ್ಲ ಸಾಮಾಜಿಕ ಸಮಸ್ಯೆಗಳು ಸೃಷ್ಟಿಯಾಗಬಹುದು. ಎಷ್ಟೊಂದು ವೈರುಧ್ಯಗಳು ಕಾಣಿಸಿಕೊಳ್ಳಬಹುದು? ಇದಕ್ಕೆಲ್ಲ ಕಾರಣ, ಆಧುನಿಕ ಸವಲತ್ತುಗಳು, ಇಂದಿನ ಜೀವನಶೈಲಿ ಮತ್ತು ಅಭಿವೃದ್ಧಿಯ ವೇಗ. ನನ್ನ ಮಕ್ಕಳ ತಲೆಮಾರು **Live in together**, ಮದುವೆ, ವಿಚ್ಛೇದನಗಳ ಜೊತೆಗೆ ಹೋರಾಡುತ್ತ ಯಾವುದೇ **Bonding** ಇಲ್ಲದ, ಜವಾಬ್ದಾರಿ ಎನ್ನುವ ಕಟ್ಟುಪಾಡುಗಳನ್ನೇ ಕಳಚಿ ಬಿಡುವ ಕಡೆಗೆ ಹೋಗುತ್ತಿದೆ. ಮದುವೆ ಮಾಡಿಕೊಂಡು ಮಕ್ಕಳನ್ನು ಹುಟ್ಟಿಸುವುದು ಮತ್ತು ಅವರನ್ನು ಸಾಕುವುದೆಂದರೆ ಈ ಅದು ಕೆಲಸಕ್ಕೆ ಬಾರದ ಕೆಲಸ, ಅದಕ್ಕಿಂತ ಇನ್ನೊಂದು ಅಸಹ್ಯ ಕೆಲಸ ಇರಲಾರದು ಎಂದು ಭಾವಿಸಿದಂತಿದೆ. ಅತ್ತೆ ಮಾವ, ತಂದೆ ತಾಯಿ ಹೇಳಿದ ಹಾಗೆ ಕೇಳಿಕೊಂಡು ಅವರ ಜೊತೆಗೆ ಒಟ್ಟಾಗಿ ಇರುವಂತಹ ಹಳೆ ಗೊಡ್ಡು ಪದ್ಧತಿಗಳು ಯಾರಿಗೂ ಬೇಡವೇ ಬೇಡ. ಗಂಡ ಹೆಂಡತಿ ಎಂಬ ಸಾಮಾಜಿಕ ಅಸಮಾನತೆಯ ಪದಗಳು ಮನುಷ್ಯ ಸಮಾಜದಿಂದ ದೂರವಾಗಿಬಿಡಬೇಕು. ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿಬಾರದು (ಗುಹೆಮಾನವರಂತೆ ನಗ್ನವಾಗಿ ಓಡಾಡಬೇಕು). ಈ ಗೊಡ್ಡು ಪದ್ಧತಿಗಳೆಲ್ಲ ಈಗಲೇ ಮಾಯವಾಗಿ